# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560 056.

ಸಂಖ್ಯೆ. ಎಸಿಎ-2/ವಿ.ವಿ.ಪ.ಸಾ..ಸಭೆ/2022-23 ದಿನಾಂಕ: 31.12.2022

ಗೆ.

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು-56.

ಮಾನ್ಯರೆ,

ವಿಷಯ: ದಿನಾಂಕ: 29.12.2022ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸಿಕೊಡುವ ಕುರಿತು.

*****

ದಿನಾಂಕ: 29.12.2022ರಂದು ಬೆಳಗ್ಗೆ 11.30 ಗಂಟೆಗೆ ಜ್ಞಾನಭಾರತಿ ಆವರಣದ ಸನೆಟ್ ಸಭಾಂಗಣದಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಮಾನ್ಯ ಸಭೆಯ ನಡಾವಳಿಯನ್ನು, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮ 4.18ರ ಅಡಿಯಲ್ಲಿ ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಿ ಕೊಡಲಾಗಿದೆ.

ಈ ನಡಾವಳಿಗಳು ತಲುಪಿದ ಹದಿನಾಲ್ಕು ದಿವಸಗಳೊಳಗೆ ತಮ್ಮಿಂದ ಯಾವುದೇ ಆಕ್ಷೇಪಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ವಿಶ್ವವಿದ್ಯಾಲಯದ ಪರಿನಿಯಮದಂತೆ ತಮ್ಮ ಸಮ್ಮತಿ ಇರುತ್ತದೆಂದು ಭಾವಿಸಲಾಗುತ್ತದೆ.

ಆದೇಶಾನುಸಾರ

ಕುಲಸಚಿವರು

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು, ರಾಜಭವನ, ಬೆಂಗಳೂರು-560001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು – 01.
3. ಕುಲಪತಿಯವರು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಯವರು–ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು-56

ಸಂಖ್ಯೆ:ಎಸಿಎ-2/ಎ2/ವಿ.ವಿ.ಪ.ವಿ.ಸಭೆ/2022-23 ದಿನಾಂಕ: 30.12.2022

ದಿನಾಂಕ: 29.12.2022ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣ ಆಡಳಿತ ವಿಭಾಗದ 'ಸೆನೆಟ್ ಸಭಾಂಗಣ'ದಲ್ಲಿ ಬೆಳಗ್ಗೆ 11.30 ಗಂಟೆಗೆ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು:

**ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಡಾ. ಜಯಕರ. ಎಸ್.ಎಮ್. ಕುಲಪತಿಗಳು, ಬೆಂ.ವಿ.ಬೆಂ. | ಅಧ್ಯಕ್ಷರು |
| 2. | ಡಾ. ಕೆ.ಎ. ಮಹೇಶ್ವರಯ್ಯ, ಪ್ರಾಂಶುಪಾಲರು | ಸದಸ್ಯರು |
| 3. | ಶ್ರೀಮತಿ ಕ್ಷಮಾ ಕುಲಕರ್ಣಿ, ಪ್ರಾಂಶುಪಾಲರು | ಸದಸ್ಯರು |
| 4. | ಡಾ. ಆರ್.ಕಾವ್ಯಶ್ರೀ, ಪ್ರಾಂಶುಪಾಲರು, | ಸದಸ್ಯರು |
| 5. | ಡಾ. ಶೈಲಜ. ಎಸ್. ಪ್ರಾಂಶುಪಾಲರು, | ಸದಸ್ಯರು |
| 6. | ಡಾ. ದೇವರಾಜ್. ಟಿ. ಪ್ರಾಂಶುಪಾಲರು, | ಸದಸ್ಯರು |
| 7. | ಡಾ. ಸ್ನೇಹಲತಾ ಜಿ. ನಾಡಿಗರ್, ಪ್ರಾಂಶುಪಾಲರು, | ಸದಸ್ಯರು |
| 8. | ಶ್ರೀ ವಿಶ್ವನಾಥ್. ಜೆ, ಪ್ರಾಂಶುಪಾಲರು, | ಸದಸ್ಯರು |
| 9. | ಡಾ. ಚಿತ್ರ. ಸಿ.ಎಸ್. ಪ್ರಾಂಶುಪಾಲರು, | ಸದಸ್ಯರು |
| 10. | ಡಾ. ಗುರುಪ್ರಸಾದ್. ಬಿ.ಜಿ, ಪ್ರಾಂಶುಪಾಲರು, | ಸದಸ್ಯರು |
| 11. | ಡಾ. ರಮ್ಯ ಆರ್. ಪ್ರಾಂಶುಪಾಲರು, | ಸದಸ್ಯರು |
| 12. | ಡಾ. ಎ.ಎನ್. ವೆಂಕಟೇಶ | ಸದಸ್ಯರು |
| 13. | ಶ್ರೀ ಕೆ. ರವಿ | ಸದಸ್ಯರು |
| 14. | ಶ್ರೀ ದೊಡ್ಡೇಗೌಡ | ಸದಸ್ಯರು |
| 15. | ಡಾ. ಕೆ.ಎಸ್. ವಿಜಯಲಕ್ಷ್ಮಿ, ಪ್ರಾಧ್ಯಾಪಕರು, | ಸದಸ್ಯರು |
| 16. | ಡಾ. ಸಿ. ಸೋಮಶೇಖರ್, ಪ್ರಾಧ್ಯಾಪಕರು, | ಸದಸ್ಯರು |
| 17. | ಡಾ. ರಾಜೇಂದ್ರ ಪ್ರಸಾದ್. ಟಿ. ಪ್ರಾಧ್ಯಾಪಕರು, | ಸದಸ್ಯರು |
| 18. | ಡಾ. ಎಂ.ವಿ. ಉಷಾದೇವಿ, ಪ್ರಾಧ್ಯಾಪಕರು, | ಸದಸ್ಯರು |
| 19. | ಡಾ. ಸಿಂಥಿಯ ಮೆನೇಜಸ್, ಡೀನರು, ವಾಣಿಜ್ಯ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 20. | ಡಾ. ಎಂ. ನಾರಾಯಣ ಸ್ವಾಮಿ, ಡೀನರು, ಶಿಕ್ಷಣ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 21. | ಡಾ. ಪಾಲ್ ವಿರ್ಯ್ಮುನ್, ಎಸ್, ಡೀನರು, ತಾಂತ್ರಿಕ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 22. | ಡಾ. ಸಿ. ನಾಗಭೂಷಣ, ಡೀನರು, ಕಲಾ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 23. | ಶ್ರೀ ಎಲ್. ಎನ್. ಮಂಜುನಾಥ್ | ಸದಸ್ಯರು |
| 24. | ಡಾ. ತಮ್ಮಯ್ಯ ಆರ್. ಬಿ, | ಸದಸ್ಯರು |
| 25. | ಶ್ರೀಮತಿ ಕೃಪಾ ಪ್ರಕಾಶ್ | ಸದಸ್ಯರು |
| 26. | ಶ್ರೀ ಅನೀಶ್ ಅಂತೋನಿ | ಸದಸ್ಯರು |
| 27. | ಶ್ರೀ ಎಂ. ರಾಘವೇಂದ್ರ ಬಾಳಿಗ | ಸದಸ್ಯರು |
| 28. | ಶ್ರೀ ಜಯರಾಮ್ ವಿ.ಎಲ್. | ಸದಸ್ಯರು |
| 29. | ನಿರ್ದೇಶಕರು (ಪ್ರಭಾರ), ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಬೆಂ.ವಿ.ಬೆಂ. | ಸದಸ್ಯರು |
| 30. | ಡಾ. ಜೆ.ಟಿ. ದೇವರಾಜು, ಕುಲಸಚಿವರು (ಮೌಲ್ಯಮಾಪನ), ಬೆಂ.ವಿ.ಬೆಂ. | ಸದಸ್ಯರು |
| 31. | ಶ್ರೀ ಅಜಿತ್ ಕುಮಾರ್ ಹೆಗ್ಡೆ, ವಿತ್ತಾಧಿಕಾರಿಗಳು, ಬೆಂ.ವಿ.ಬೆಂ. | ಸದಸ್ಯರು |
| 32. | ಶ್ರೀ ಮಹೇಶ್ ಬಾಬು, ಎನ್, ಕೆ.ಎ.ಎಸ್, ಕುಲಸಚಿವರು, ಬೆಂ.ವಿ.ಬೆಂ. | ಸದಸ್ಯ ಕಾರ್ಯದರ್ಶಿ |

ಮಾನ್ಯ ಕುಲಸಚಿವರು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲು ಸೂಚಿಸಿದರು.

ಶ್ರೀ ದೊಡ್ಡೇಗೌಡ ಅವರು ಮಾತನಾಡಿ ರಾಷ್ಟ್ರಕವಿ ಡಾ: ಕುವೆಂಪು ಅವರ 119ನೇ ಜನ್ಮದಿನೋತ್ಸವದ ಅಂಗವಾಗಿ ಎಲ್ಲಾ ಸದಸ್ಯರಿಗೆ ತಮ್ಮ ಶುಭಾಷಯಗಳನ್ನು ತಿಳಿಸಿದರು.

<u>**ವಿಷಯ ಸೂಚಿ:**</u> 1: ದಿನಾಂಕ: **21.09.2022**ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

ಡಾ: ಸಿಂಥಿಯ ಮೆನೆಜಸ್ ಅವರು ಮಾತನಾಡಿ, ದಿನಾಂಕ 21.09.2022ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸರಿಯಾಗಿದ್ದು ಸ್ಥಿರೀಕರಿಸಬಹುದಾಗಿದೆ ಎಂದು ತಿಳಿಸಿದರು.

<u>**ನಿರ್ಣಯ:**</u>

ಚರ್ಚೆಯ ನಂತರ ದಿನಾಂಕ: **21.09.2022**ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸಲಾಯಿತು.

<u>**ವಿಷಯ ಸೂಚಿ:**</u> 2: Regulations Governing the Choice Based Credit System (CBCS) for two years (four semesters) "MBA (Business Analytics)"ರ ಮೇಲೆ ದಿನಾಂಕ: 12.09.2022ರಂದು ಸರ್ಕಾರದಿಂದ ಬಂದ ಪತ್ರಕ್ಕೆ ಸ್ಪಷ್ಟೀಕರಣ ನೀಡುವ ಕುರಿತು.

ಡಾ: ಸಿಂಥಿಯಾ ಮೆನೆಜಸ್ ಅವರು ಮಾತನಾಡಿ, ನಿರ್ವಹಣಾ ಅಧ್ಯಯನ ಮಂಡಳಿಯು MBA ಕೋರ್ಸಿನಲ್ಲಿ ಹೆಚ್ಚಿನ ಸಂಖ್ಯೆಯ ವಿಶೇಷ ವಿಷಯಗಳನ್ನು (Specialization) ಸೇರ್ಪಡೆಗೊಳಿಸಲು ನಿರ್ಧರಿಸಿದೆ. ಹಾಗಾಗಿ ಆ ವಿಶೇಷ ವಿಷಯಗಳಲ್ಲಿ Business Analytics ವಿಷಯವೂ ಒಂದಾಗಿದೆ. ಕೋರ್ಸ್ ಮ್ಯಾಟ್ರಿಕ್ಸ್‌ನಲ್ಲಿ ಯಾವುದೇ ಬದಲಾವಣೆ ಮಾಡಲಾಗಿರುವುದಿಲ್ಲ. ಪ್ರಾಜೆಕ್ಟ್ ಬದಲಾಗಿ 3 ಮತ್ತು 4 ನೇ ಸೆಮಿಸ್ಟರ್‌ನಲ್ಲಿ ಕೈಗಾರಿಕಾ ಉದ್ಯಮಗಳಲ್ಲಿ ಅನುಕ್ರಮವಾಗಿ Macro Problems ಹಾಗೂ 4ನೇ ಸೆಮಿಸ್ಟರ್‌ನಲ್ಲಿ Macro Problems ಬಗ್ಗೆ Analysis ಬಗ್ಗೆ

ಪಠ್ಯಕ್ರಮಗಳಲ್ಲಿ ಪ್ರಾಯೋಗಿಕ ಅಂಶಗಳನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದು ವಿವರವಾಗಿ ಪಠ್ಯಕ್ರಮಗಳನ್ನು ವಿದ್ಯಾವಿಷಯಕ ಪರಿಷತ್ತಿಗೆ ವಿವರಿಸಿದರು.

<u>ನಿರ್ಣಯ:</u>

ಸುಧೀರ್ಘ ಚರ್ಚೆಯ ನಂತರ, ಡೀನರು ಸಲ್ಲಿಸಿರುವ ವಿವರಣೆಯೊಂದಿಗೆ ಪರೀಷ್ಕರಿಸಿದ Regulations Governing the Choice Based Credit System (CBCS) for two years (four semesters) "MBA (Business Analytics)"ನ್ನು ಅನುಮೋದಿಸಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಲು ಶಿಫಾರಸ್ಸು ಮಾಡಿತು.

**<u>ವಿಷಯ ಸೂಚಿ:</u>** 3: 2021-22ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

ವಿತ್ತಾಧಿಕಾರಿಗಳು 2021-22ನೇ ಸಾಲಿನ ವಾರ್ಷಿಕ ಲೆಕ್ಕಪತ್ರದ ವಿವರಗಳನ್ನು ಮಂಡಿಸಿ ಸದರಿ ಸಾಲಿನ ಆಸ್ತಿ ಮತ್ತು ಋಣಗಳ ಪಟ್ಟಿ ಆದಾಯ ಮತ್ತು ಖರ್ಚು ಹಾಗೂ ಜಮೆ ಮತ್ತು ಪಾವತಿಗಳ ವಿವರಗಳನ್ನು ಸಭೆಗೆ ವಿವರಿಸಿದರು. ಈ ಎಲ್ಲಾ ಲೆಕ್ಕಪತ್ರಗಳನ್ನು ವಿಶ್ವವಿದ್ಯಾಲಯದ ಚಾರ್ಟರ್ಡ್ ಅಕೌಂಟಂಟ್‌ರವರು ಸತ್ಯಾಪಿಸಿ ದೃಢೀಕರಿಸಿರುತ್ತಾರೆ ಹಾಗೂ ಅವರು ಸೂಚಿಸಿದ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿ 2021-22ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಅನುಮೋದಿಸಬಹುದಾಗಿದೆ ಎಂದು ತಿಳಿಸಿದರು.

<u>ನಿರ್ಣಯ:</u>

ಚರ್ಚೆಯ ನಂತರ, ವಿದ್ಯಾವಿಷಯಕ ಪರಿಷತ್ತು ಕೆ.ಎಸ್.ಯು.ಅಧಿನಿಯಮ 32 (3) (i) ಮತ್ತು 47 (2)ರ ಪ್ರಕಾರ, 2021-22ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಪರಿಗಣಿಸಿ ಅನುಮೋದಿಸಿತು.

<u>ವಿಷಯ ಸೂಚಿ: 4</u>: To consider approval of the proceedings of the Faculty of Engineering at its meeting held on 27.12.2022.

ಇಂಜಿನಿಯರಿಂಗ್ ನಿಕಾಯದ ಡೀನರು ದಿನಾಂಕ: 27.12.2022ರಂದು ಜರುಗಿದ ಸಭೆ ನಡಾವಳಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯ ಮುಂದೆ ಮಂಡಿಸಿ ಅನುಮೋದನೆಯನ್ನು ಕೋರಿದರು.

<u>ನಿರ್ಣಯ:</u>

ಚರ್ಚೆಯ ನಂತರ, ದಿನಾಂಕ 27.12.2022 ರಂದು ಜರುಗಿದ ತಾಂತ್ರಿಕ ನಿಕಾಯದ ಸಭೆಯ ನಡಾವಳಿಯನ್ನು ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿತು.

**ವಿಷಯ ಸೂಚಿ:** 5: 2022-23ನೇ ಸಾಲಿಗೆ ಶ್ರೀ ಎಸ್. ಕರಿಯಪ್ಪ ಕಾಲೇಜ್ ಆಫ್ ಎಜುಕೇಷನ್ ಮತ್ತು ಶ್ರೀ ರಾಘವೇಂದ್ರ ಕಾಲೇಜ್ ಆಫ್ ಎಜುಕೇಷನ್‌ಗಳ ಸಂಯೋಜನಾ ನವೀಕರಣದ ವಿಷಯದಲ್ಲಿ ಪ್ರೊ. ಎಂ. ನಾರಾಯಣಸ್ವಾಮಿ, ಡೀನರು, ಶಿಕ್ಷಣ ನಿಕಾಯ, ಇವರ ಅಧ್ಯಕ್ಷತೆಯಲ್ಲಿ ಸಲ್ಲಿಸಲಾದ ಸ್ಥಳೀಯ ವಿಚಾರಣಾ ಸಮಿತಿಯ ವರದಿಗಳನ್ನು ಪರಿಗಣಿಸುವ ಬಗ್ಗೆ.

**ನಿರ್ಣಯ:**

2022-23ನೇ ಸಾಲಿಗೆ ಶ್ರೀ ಎಸ್. ಕರಿಯಪ್ಪ ಕಾಲೇಜ್ ಆಫ್ ಎಜುಕೇಷನ್ ಮತ್ತು ಶ್ರೀ ರಾಘವೇಂದ್ರ ಕಾಲೇಜ್ ಆಫ್ ಎಜುಕೇಷನ್‌ಗಳ ಸಂಯೋಜನಾ ನವೀಕರಣದ ವಿಷಯದಲ್ಲಿ ಪ್ರೊ. ಎಂ. ನಾರಾಯಣಸ್ವಾಮಿ, ಡೀನರು, ಶಿಕ್ಷಣ ನಿಕಾಯ, ಇವರ ಅಧ್ಯಕ್ಷತೆಯಲ್ಲಿ ಸಲ್ಲಿಸಲಾದ ಸ್ಥಳೀಯ ವಿಚಾರಣಾ ಸಮಿತಿಯ ವರದಿಗಳನ್ನು ಕೆ.ಎಸ್.ಯು ಅಧಿನಿಯಮ 2000 ಪ್ರಕರಣ 59 (8)ರಡಿಯಲ್ಲಿ ಪರಿಗಣಿಸಿ ವಿದ್ಯಾವಿಷಯಕ ಪರಿಷತ್ತು ಸದರಿ ವರದಿಗಳನ್ನು ಪರಿಗಣಿಸಿತು.

**ವಿಷಯ ಸೂಚಿ:** 6: ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳಲ್ಲಿ 2023-24ನೇ ಶೈಕ್ಷಣಿಕ ವರ್ಷಕ್ಕೆ ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಳ ಮಾಡುವ ಬಗ್ಗೆ.

ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದ ಕೆಲವೊಂದು ಅಧ್ಯಯನ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಬಹಳ ಬೇಡಿಕೆ ಇದ್ದು ವಿದ್ಯಾರ್ಥಿಗಳ ಮನವಿ ಮೇರೆಗೆ ಸಂಬಂಧಪಟ್ಟ ವಿಭಾಗಗಳ ಅಧ್ಯಕ್ಷರುಗಳು ವಿದ್ಯಾರ್ಥಿ ಪ್ರಮಾಣ ಹೆಚ್ಚಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಮುಂದುವರೆದು, 2022-23ನೇ ಸಾಲಿನ ಸ್ನಾತಕೋತ್ತರ ಪ್ರವೇಶ ಪ್ರಕ್ರಿಯೆಯಲ್ಲಿ ಕೆಲವೊಂದು ಅಧ್ಯಯನ ವಿಭಾಗಗಳಲ್ಲಿರುವ Payment seat ಗಳ ವಿದ್ಯಾರ್ಥಿ ಪ್ರಮಾಣಗಳನ್ನು ಆಯಾ ವಿಭಾಗಗಳ ಅಧ್ಯಕ್ಷರುಗಳ ಮನವಿಯ ಮೇರೆಗೆ ಪ್ರತಿ ವಿಭಾಗಗಳ ಬೇಡಿಕೆಗೆ ಅನುಸಾರ ಹೆಚ್ಚುವರಿಯಾಗಿ 5 ರಿಂದ 10 ಸೀಟುಗಳ ವರೆಗೆ Payment category ಯಡಿ ನೀಡಿರುವ ಅನುಮತಿಯನ್ನು ಅನುಸಮರ್ಥನೆಗಾಗಿ ವಿದ್ಯಾವಿಷಯಕ ಪರಿಷತ್ತಿನ ಸಭೆಯ ಮುಂದೆ ಮಂಡಿಸಲಾಗಿದೆ ಎಂದು ತಿಳಿಸಿದರು.

ಕುಲಸಚಿವರು ಮುಂದುವರೆದು, ಬೇರೆ ವಿಶ್ವವಿದ್ಯಾಲಯಗಳಲ್ಲಿ ಕೆಲವು ಸ್ನಾತಕೋತ್ತರ ವಿಷಯಗಳಲ್ಲಿ 150ರವರೆಗೆ ಪ್ರವೇಶ ಮಾಡಿಕೊಳ್ಳುತ್ತಿದ್ದಾರೆ. ಬೇರೆ ವಿಶ್ವವಿದ್ಯಾಲಯಗಳಿಗೆ ಹೋಲಿಕೆ ಮಾಡಿದ್ದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹೆಚ್ಚಿನ ಮೂಲ ಸೌಕರ್ಯಗಳು ಲಭ್ಯವಿದೆ. ಆದ್ದರಿಂದ ಸಂಬಂಧಪಟ್ಟ ಅಧ್ಯಯನ ವಿಭಾಗದ ಅಧ್ಯಕ್ಷರು ಸಲ್ಲಿಸಿದ ಮನವಿಗಳನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ ಈ ವಿಷಯದಲ್ಲಿ ವಿದ್ಯಾವಿಷಯಕ ಪರಿಷತ್ತು ತಾತ್ವಿಕ ಒಪ್ಪಿಗೆ ನೀಡಬಹುದಾಗಿದೆ. ಅಧ್ಯಯನ ವಿಭಾಗಗಳ ಅಧ್ಯಯನ ಕೊಠಡಿಗಳು, ಪೀಠೋಪಕರಣಗಳು ಹೆಚ್ಚುವರಿಯಾಗಿ ಅವಶ್ಯಕತೆಯಿದ್ದರೆ ವಿಶ್ವವಿದ್ಯಾಲಯದವತಿಯಿಂದ ಒದಗಿಸಿಕೊಡಲಾಗುವುದೆಂದು ತಿಳಿಸಿದರು. ಪ್ರೊ: ಎಂ.ನಾರಾಯಣ ಸ್ವಾಮಿಯವರು ಮಾತನಾಡಿ ಈ ಪ್ರಸ್ತಾವನೆಯು ಅತಿ ಉತ್ತಮವಾಗಿದ್ದು, ವಿದ್ಯಾರ್ಥಿಗಳ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಉತ್ತಮವಾಗಿದೆ. ಅಧ್ಯಯನ ವಿಭಾಗಳ ಅಗತ್ಯತೆಯ ಅನುಸಾರ ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸಬಹುದಾಗಿದೆ ಹಾಗೂ ವಿದ್ಯಾರ್ಥಿ ಪ್ರಮಾಣಕ್ಕನುಗುಣವಾಗಿ ಹೆಚ್ಚುವರಿ ಮೂಲಸೌಕರ್ಯವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಬಹುದು, ಇದರಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

<u>**ನಿರ್ಣಯ:**</u>

ದೀರ್ಘ ಚರ್ಚೆಯ ನಂತರ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ನಾತಕೋತ್ತರ ಅಧ್ಯಯನವಿಭಾಗಗಳ ವಿದ್ಯಾರ್ಥಿಗಳ ಪ್ರವೇಶ ಪ್ರಮಾಣವನ್ನು ಅಗತ್ಯತೆ ಅನುಗುಣವಾಗಿ ಗರಿಷ್ಠ 150ರ ಮಿತಿಗೊಳಪಟ್ಟು ಹೆಚ್ಚಿವರಿಯಾಗಿ ಒಂದು ವಿಭಾಗ (additionally one more section) ಮಂಜೂರು ಮಾಡಲು ವಿದ್ಯಾವಿಷಯಕ ಪರಿಷತ್ತು ತಾತ್ವಿಕವಾಗಿ ಅನುಮೋದನೆ ನೀಡಿತು.

<u>**ವಿಷಯ ಸೂಚಿ:**</u> 7: 2018-19ನೇ ಸಾಲಿನ ಸಿಬಿಸಿಎಸ್ ಪಠ್ಯಕ್ರಮದಡಿಯಲ್ಲಿ ಬಿ.ಟೆಕ್-ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಪ್ರಥಮ ಸೆಮಿಸ್ಟರ್‌ಗೆ ಯುವಿಸಿಇ ಅಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಯು ಪ್ರಸ್ತುತ 2022-23ನೇ ಸೆಮಿಸ್ಟರ್ ಮರು ಪ್ರವೇಶಕ್ಕೆ ಮನವಿ ಸಲ್ಲಿಸಿರುವ ಕುರಿತು.

ಆಹ್ವಾನಿತರಾಗಿ ಸಭೆಯಲ್ಲಿ ಭಾಗವಹಿಸಿದ್ದ ಯುವಿಸಿಇ ಪ್ರಾಂಶುಪಾಲರು ಮಾತನಾಡಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದಲ್ಲಿ 2018-19ನೇ ಸಾಲಿನಲ್ಲಿ CBCS ಅಡಿಯಲ್ಲಿ ಮೊದಲ ಮತ್ತು ಎರಡನೇ ಸೆಮಿಸ್ಟರ್ ಬಿ.ಟೆಕ್. ಕೋರ್ಸನ್ನು ಪೂರ್ಣಗೊಳಿಸಿದ್ದು, ಅನಾರೋಗ್ಯ ನಿಮಿತ್ತ ಮೊಟಕುಗೊಳಿಸಿ, ವಿದ್ಯಾಭ್ಯಾಸವನ್ನು ಮುಂದುವರೆಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ 2022-23ನೇ ಸಾಲಿಗೆ ಮರು-ಪ್ರವೇಶ ಬಯಸಿರುವುದರಿಂದ ವಿದ್ಯಾರ್ಥಿಯ ಮನವಿಯ ಪರಿಗಣಿಸಬೇಕೆಂದು ಅಧ್ಯಕ್ಷರು ಶಿಫಾರಸ್ಸು ಮಾಡಿದ್ದಾರೆ ಆದ ಕಾರಣ ಶ್ರೀ. ಅಕ್ಷಿನ್ ನಟರಾಜ್ ಎಂಬ ವಿದ್ಯಾರ್ಥಿಯ ಮನವಿಯನ್ನು ಕೋರಿದರು.

ಕುಲಸಚಿವರು ಮೌಲ್ಯಮಾಪನರವರು ಮಾತನಾಡಿ 2018-19ನೇ ಸಾಲಿನಲ್ಲಿ CBCS ಪಠ್ಯಕ್ರಮವಿದ್ದು, 2021-22ನೇ ಸಾಲಿನಿಂದ NEP-2020 ಪಠ್ಯಕ್ರಮಗಳು ಜಾರಿಗೆ ಬಂದಿರುವುದರಿಂದ ಪರೀಕ್ಷ ವಿಧಾನ, ವಿನಿಯಮ ಹಾಗೂ ಪಠ್ಯಕ್ರಮಗಳು ಬದಲಾವಣೆಗಳು ಆಗಿರುತ್ತದೆ ಸದರಿ ವಿದ್ಯಾರ್ಥಿಯ CBCS ಅಡಿಯಲ್ಲಿ ಅಧ್ಯಯನ ಮಾಡಿರುವ ಮೊದಲೆರಡು ಸೆಮಿಸ್ಟರ್‌ನ ಫಲಿತಾಂಶ/ಅಂಕಗಳನ್ನು /ದತ್ತಾಂಶವನ್ನು NEP-2020 ಅಡಿ ಜಾರಿ ಮಾಡಿರುವ UUCMS ತಂತ್ರಾಂಶಕ್ಕೆ ವರ್ಗಾವಣೆ (migrate) ಕಷ್ಟಸಾಧ್ಯವಾಗಬಹುದು ಹಾಗೂ ತಾಂತ್ರಿಕ ಸಮಸ್ಯೆಗಳಿವೆ. ಆದ್ದರಿಂದ ಸದರಿ ವಿದ್ಯಾರ್ಥಿಗೆ CBCS ಅಡಿಯಲ್ಲಿಯೇ ಅಧ್ಯಯನ ಮುಂದುವರೆಸಲು ಸೂಚಿಸುವುದು ಸೂಕ್ತವೆಂದು ತಿಳಿಸಿದರು. ಮುಂದುವರೆದು, ಇದೇ ತೆರನಾದ ಸಾಕಷ್ಟು ವಿದ್ಯಾರ್ಥಿಗಳು ಸಾಮಾನ್ಯ ಸ್ನಾತಕ ಕೋರ್ಸುಗಳಲ್ಲಿರುವುದರಿಂದ ಅವರುಗಳೂ ಸಹ ಮನವಿ ಸಲ್ಲಿಸುತ್ತಾರೆ ಎಂದು ತಿಳಿಸಿದರು.

ಪ್ರಾಂಶುಪಾಲರು ಮಾತನಾಡಿ ಸರ್ಕಾರದ ಮಟ್ಟದಲ್ಲಿ UUCMS ತಂತ್ರಾಂಶಕ್ಕೆ ಸದರಿ ವಿದ್ಯಾರ್ಥಿಯ ದತ್ತಾಂಶ ವರ್ಗಾವಣೆ ಹಾಗೂ 3ನೇ ಸಮಿಸ್ಟರ್‌ಗೆ ಸೇರ್ಪಡೆಗೊಳಿಸಲು ತಾಂತ್ರಿಕ ಸಹಾಯ ಪಡೆಯುವ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಇದೇ ತೆರನಾದ ಸಮಸ್ಯೆಗಳಿಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ತೆಗೆದುಕೊಂಡಿರುವ ಕ್ರಮದ ಬಗ್ಗೆ ಪರಿಶೀಲಿಸಬಹುದಾಗಿದೆ ಎಂದು ತಿಳಿಸಿದರು.

**ನಿರ್ಣಯ:**

ದೀರ್ಘ ಚರ್ಚೆಯ ನಂತರ, ಸರ್ಕಾರದ ಮಟ್ಟದಲ್ಲಿ ವಿವರಿಸಿ UUCMS ತಂತ್ರಾಂಶಕ್ಕೆ ಮೇಲ್ಕಂಡ ವಿದ್ಯಾರ್ಥಿಯ ದತ್ತಾಂಶ ವರ್ಗಾವಣೆ ಮತ್ತು ಹಾಗೂ 3ನೇ ಸೆಮಿಸ್ಟರ್‌ಗೆ UUCMS ತಂತ್ರಾಂಶದಲ್ಲಿ ಸದರಿ ವಿದ್ಯಾರ್ಥಿಯ ವಿದ್ಯಾರ್ಥಿಗಳ upload ಮಾಡುವ ಸಂಪೂರ್ಣ ಜವಾಬ್ದಾರಿಯನ್ನು ಪ್ರಾಂಶುಪಾಲರು, ಯುವಿಸಿಇ ತೆಗೆದುಕೊಳ್ಳಬೇಕು ಎಂಬ ಷರತ್ತಿಗೊಳಪಟ್ಟು ಬಿ.ಟೆಕ್. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ 3ನೇ ಸೆಮಿಸ್ಟರ್‌ಗೆ NEP-2020 ರಡಿ ಶ್ರೀ. ಅಕ್ಷಿನ್ ನಟರಾಜ್ ಎಂಬ ವಿದ್ಯಾರ್ಥಿಗೆ ಪ್ರವೇಶಾತಿ ನೀಡಲು ವಿದ್ಯಾವಿಷಯಕ ಪರಿಷತ್ತು ತಾತ್ವಿಕ ಅನುಮೋದನೆಯನ್ನು ನೀಡಿತು. ಈ ಬಗ್ಗೆ ಸರ್ಕಾರಕ್ಕೆ ಎಲ್ಲಾ ವಿವರಗಳೊಂದಿಗೆ ಪತ್ರ ವ್ಯವಹಾರ ನಡೆಸಲು ವಿದ್ಯಾವಿಷಯಕ ಪರಿಷತ್ತು ಸೂಚಿಸಿತು.

**ವಿಷಯ ಸೂಚಿ:** 8: Full carry over for CBCS 2021 and CBCS 2018 (NEP-2020) scheme B.Tech students – reg.

ಆಹ್ವಾನಿತರಾಗಿ ಸಭೆಯಲ್ಲಿ ಭಾಗವಹಿಸಿದ್ದ ಯುವಿಸಿಇ ಪ್ರಾಂಶುಪಾಲರು ಮಾತನಾಡಿ 2021-22ನೇ ಸಾಲಿನಿಂದ ಬಿ.ಟೆಕ್. ಪದವಿ ಕೋರ್ಸುಗಳಲ್ಲಿ NEP-2020 ನ್ನು ಅನುಷ್ಠಾನಗೊಳಿಸಲಾಗಿದೆ ಹಾಗೂ 2022-23 ಸಾಲಿನ ಮೊದಲ ಸೆಮಿಸ್ಟರ್ ಪದವಿ ಕೋರ್ಸುಗಳು ಯುವಿಸಿಇ ಯುನಿವರ್ಸಿಟಿ ಅಡಿಯಲ್ಲಿ ಬರುತ್ತವೆ.

ಯುವಿಸಿಇಯ ಪಠ್ಯಕ್ರಮಗಳನ್ನು IIT ಮಾದರಿಯಲ್ಲಿ ಸಿದ್ಧಪಡಿಸಲಾಗುತ್ತಿದೆ ಆದ ಕಾರಣ 2020-21 ನೇ ಸಾಲಿನಲ್ಲಿ NEP-2020 ರಡಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಪ್ರಸ್ತುತ 3ನೇ ಸೆಮಿಸ್ಟರ್ 2019-20ನೇ ಸಾಲು ಮತ್ತು ಅದಕ್ಕಿಂತ ಮುಂಚಿತವಾಗಿ CBCS scheme ಅಡಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು 5 ಹಾಗೂ 7ನೇ ಸೆಮಿಸ್ಟರ್ ನಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಆದ ಕಾರಣ CBCS-2018 scheme ಹಾಗೂ 2021 scheme ಅಡಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ವಿನಿಯಮಗಳ ಪ್ರಕರಣ 14 ಮತ್ತು 18ರ ಪ್ರಕರಣಗಳಡಿ ವಿಧಿಸಿರುವ ಷರತ್ತನ್ನು ಸಡಿಲಿಸಿ, full carry-over ನೀಡಲು ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಯನ್ನು ಕೋರಿದರು.

ಕುಲಪತಿಗಳು ಮಾತನಾಡಿ, Apex Body ಆದ AICTE ಯ ನಿಯಮಗಳನ್ನು ಪರಿಶೀಲಿಸಬೇಕಾಗುತ್ತದೆ. ಆದ ಕಾರಣ ಈ ಬಗ್ಗೆ ಕಾನೂನು ಅಭಿಪ್ರಾಯ ಪಡೆದುಕೊಳ್ಳುವುದು ಸೂಕ್ತವೆಂದು ತಿಳಿಸಿದರು.

**ನಿರ್ಣಯ:**

ಚರ್ಚೆಯ ನಂತರ, ಯುವಿಸಿಇ ಇಂಜಿನಿಯರಿಂಗ್ ವಿಭಾಗಗಳಲ್ಲಿ CBCS-2018 scheme ಹಾಗೂ 2021 (NEP) scheme ಅಡಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ full carry-over ನೀಡುವ ಬಗ್ಗೆ AICTE ನಿಯಮಾವಳಿಗಳನ್ನು ಪರಿಶೀಲಿಸಿ ಕಾನೂನು ಅಭಿಪ್ರಾಯ ಪಡೆದು ನಂತರ ಕ್ರಮವಹಿಸಬೇಕೆಂದು ವಿದ್ಯಾವಿಷಯಕ ಪರಿಷತ್ತು ನಿರ್ಣಯಿಸಿತು.

**ಸಾಮಾನ್ಯ ಚರ್ಚೆ:**

1. ಡಾ: ತಮ್ಮಯ್ಯ ಅವರು ಮಾತನಾಡಿ ಎಂ.ಬಿ.ಎ. ವಿಭಾಗದಲ್ಲಿ ಇಬ್ಬರು ಪ್ರಾಧ್ಯಾಪಕರು ಮಾತ್ರ ಇದ್ದು, ಸಂಯೋಜಿತ ಕಾಲೇಜುಗಳಲ್ಲಿ 3000ಕ್ಕೂ ಹೆಚ್ಚು ಎಂ.ಬಿ.ಎ. ವಿದ್ಯಾರ್ಥಿಗಳಿಗೆ ಈ ಇಬ್ಬರು ಪ್ರಾಧ್ಯಾಪಕರುಗಳೇ ಪ್ರಾಜೆಕ್ಟ್ Viva-Voce ಮಾಡುತ್ತಿದ್ದಾರೆ. ಇದರ ಸಾಧ್ಯತೆ ಹೇಗೆ ಎಂದು ಪ್ರಶ್ನಿಸಿದರು. ಕುಲಸಚಿವರು (ಮೌಲ್ಯಮಾಪನ)ರವರು ಮಾತನಾಡಿ, ಬೇರೆ ಸ್ನಾತಕೋತ್ತರ ವಿಭಾಗಗಳಲ್ಲಿರುವ ಪದ್ಧತಿಯಂತೆ Board of Examiners ಪಟ್ಟಿಯಲ್ಲಿರುವ ಪರೀಕ್ಷಕರನ್ನು ಉಪಯೋಗಿಸಿಕೊಂಡು ಒಂದು ಕಾಲೇಜಿನ ಪರೀಕ್ಷಕರನ್ನು ಇನ್ನೊಂದು ಕಾಲೇಜಿಗೆ ಪ್ರಾಜೆಕ್ಟ್ Viva-Voce ಮಾಡಲು ನಿಯೋಜಿಸಬಹುದಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ ಈ ವಿಷಯವನ್ನು ಪ್ರತ್ಯೇಕವಾಗಿ ಸಂಬಂದಿಸಿದವರೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

2. ಡಾ: ಗುರುಪ್ರಸಾದ್ ಡಿ.ಜಿ. ಅವರು ಮಾತನಾಡಿ, ಇತ್ತೀಚೆಗೆ ಜರುಗಿದ ಪದವಿ ಮೌಲ್ಯಮಾಪನದ ಕೆಲವು ವಿದ್ಯಾರ್ಥಿಗಳಿಗೆ ಪರೀಕ್ಷಾ ಮರು-ಮೌಲ್ಯಮಾಪನದಲ್ಲಿ 40 ಅಂಕಗಳಷ್ಟು ಹೆಚ್ಚು ಅಂಕಗಳು ಬಂದಿದೆ. Erratic evaluation ನಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಈ ನ್ಯೂನತೆಯನ್ನು ಸರಿಪಡಿಸಬೇಕು ಹಾಗೂ wrong bubbling ಬಗ್ಗೆ ವಿಶ್ವವಿದ್ಯಾಲಯ ವಿಧಿಸುವ ಶುಲ್ಕವನ್ನು ರದ್ದುಪಡಿಸಲು ಕೋರಿದರು.

ಕುಲಸಚಿವರು (ಮೌಲ್ಯಮಾಪನ)ರವರು ಮಾತನಾಡಿ wrong bubbling ಬಗ್ಗೆ ವಿಶ್ವವಿದ್ಯಾಲಯ ವಿಧಿಸಿರುವ ಶುಲ್ಕವು ಕ್ರಮಬದ್ಧವಾಗಿದೆ ಹಾಗೂ wrong bubbling ನಿಂದ ಮೌಲ್ಯಮಾಪನ ಕಾರ್ಯಗಳಿಗೆ ತೊಂದರೆಯಾಗಿದೆ. ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮುಖಪುಟದಲ್ಲಿ ನಮೂದಿಸುವ ವಿವರಗಳನ್ನು ಪರಿಕ್ಷಾ ಮೇಲ್ವಿಚಾರಕರು ಹೆಚ್ಚಿನ ಜವಾಬ್ದಾರಿವಹಿಸಿ ವಿದ್ಯಾರ್ಥಿಗಳ ವಿವರಗಳ ಸರಿ ಇದೆಯೇ ಎಂದು ಪರಿಶೀಲಿಸುವುದು ಅವರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಮಾತನಾಡಿ Erratic evaluation ತಡೆಗಟ್ಟಲು ಒಂದು ಮಾರ್ಗಸೂಚಿಯನ್ನು ಸಿದ್ಧಪಡಿಸಲು ಸೂಚಿಸುವುದಾಗಿ ತಿಳಿಸಿದರು.

3. ಡಾ: ವೆಂಕಟೇಶ್ ಅವರು ಮಾತನಾಡಿ ಪಿಹೆಚ್.ಡಿ. ಪ್ರವೇಶಗಳನ್ನು ಆದಷ್ಟು ಬೇಗ ನಡೆಸಲು ಕೋರಿದರು. ಕುಲಸಚಿವರು ಮಾತನಾಡಿ ಪಿಹೆಚ್.ಡಿ. ವಿನಿಯಮಗಳನ್ನು ಈಗಾಗಲೇ ಮಾನ್ಯ ರಾಜ್ಯಪಾಲರ ಕಚೇರಿಗೆ ಕಳುಹಿಸಲು ಸರ್ಕಾರದ ಮಟ್ಟದಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ ಎಂದು ತಿಳಿದು ಬಂದಿದೆ. ರಾಜ್ಯಪಾಲರ ಅನುಮೋದನೆಯಾದ ನಂತರ, ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದೆಂದು ತಿಳಿಸಿದರು.

4. ಡಾ. ಕೆ.ಎ. ಮಹೇಶ್ವರಯ್ಯ, ಮಾತನಾಡಿ ಸಂಯೋಜಿತ ಕಾಲೇಜುಗಳ Governing Council ಗಳಿಗೆ ವಿಶ್ವವಿದ್ಯಾಲಯದಿಂದ ಹಿಂದೆ ನಾಮನಿರ್ದೇಶನ ಮಾಡಿದ್ದ ಸದಸ್ಯರುಗಳ ಅವಧಿಯು ಮುಗಿದಿದ್ದು, ಆದಷ್ಟು ಬೇಗ ಅವರ ಸ್ಥಾನದಲ್ಲಿ ಬೇರೆ ಸದಸ್ಯರನ್ನು ನಾಮನಿರ್ದೇಶನ ಮಾಡಬೇಕೆಂದು ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸಂಬಂಧಪಟ್ಟ ವಿಭಾಗಕ್ಕೆ ಸೂಚಿಸಲಾಗುವುದೆಂದು ತಿಳಿಸಿದರು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಯವರು

॥ ಪ್ರತಿ ॥

31/10/...

ಕುಲಸಚಿವರು